ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

<u>ಸಿ.ಸಿ.1136/2025</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ದೇವರಾಜ | ಪಿ.ಡಬ್ಲ್ಯೂ.2 |
| ತಂದೆಯ ಹೆಸರು | : | ಮರುಳನಾಯಕ್ | ಸಿ.ಡಬ್ಲ್ಯೂ.3 |
| ವಯಸ್ಸು | : | 42 ವರ್ಷ | |
| ವೃತ್ತಿ | : | ವ್ಯವಸಾಯ | |
| ವಾಸ | : | ಬಿ.ಬಸವನಹಳ್ಳಿ | |

<u>ದಿನಾಂಕಃ 09-12-2025 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-</u>

ಆರೋಪಿ ಗೊತ್ತು. ಚಾಸಾ-2 ರವರು ಗೊತ್ತು. ನೋಟೀಸ್ ಮತ್ತು ಮಹಜರ್ ಅನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-1 ಮತ್ತು ನಿಪಿ-2 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-1(ಬಿ) ಮತ್ತು ನಿಪಿ-2(ಬಿ) ಇರುತ್ತದೆ. ಸದರಿ ಸಹಿಗಳನ್ನು ಸುಮಾರು 3 ರಿಂದ 4 ತಿಂಗಳುಗಳ ಹಿಂದೆ ನನ್ನ ಜಮೀನಿನಿಂದ ನಾನು ವಾಪಾಸ್ ಬರುತ್ತಿದ್ದ ಸಮಯದಲ್ಲಿ ಊರಿನ ಹತ್ತಿರ ಪಡೆದುಕೊಂಡಿರುತ್ತಾರೆ. ಸದರಿ ದಾಖಲಗಳಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಎಪಿಪಿರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ-

ನಾನು ಡಿಕ್ರಿ ವರೆಗೆ ಓದಿರುತ್ತೇನೆ. ಸಾಮಾನ್ಯವಾಗಿ ದಾಖಲೆಗಳನ್ನು ಓದಿ ನೋಡಿ ಸಹಿ ಹಾಕಿರುತ್ತೇನೆ ಎಂದರೆ ಸರಿ. ನನ್ನಲ್ಲಿ ಸಹಿಯನ್ನು ಹಾಕುವಂತೆ ಕೋರಿಕೊಂಡ ಪೊಲೀಸ್ ಅಧಿಕಾರಿ ನನಗೆ ಪರಿಚಯ ಇರುವುದಿಲ್ಲ. ಬಸವನಹಳ್ಳಿ ತಾಂಡ್ಯ ಎಂದು ಬೋರ್ಡ್ ಇರುವಲ್ಲಿ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ನಾನು ಮತ್ತು ಆರೋಪಿ ಒಂದೇ ಊರಿನವರು ಎಂದರೆ ಸರಿ. ದಿಃ26.05.2025 ರಂದು ನಾನು ಮತ್ತು ಚಾಸಾ-2 ರವರು ದೇವಾಲಯದ ಬಳಿ ನಿಂತಿದ್ದಾಗ ಚಾಸಾ-1 ರವರು ನಮ್ಮನ್ನು ಕರೆದು ಮಾಹಿತಿಯನ್ನು ತಿಳಿಸಿ ನಿಪಿ-1 ರಂತೆ ನೋಟೀಸ್ ಅನ್ನು ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾವು ಒಪ್ಪಿಕೊಂಡಿದ್ದು ನಮ್ಮನ್ನು ಕರೆದುಕೊಂಡು ಘಟನಾ ಸ್ಥಳಕ್ಕೆ ಹೋಗಿದ್ದು ಅಲ್ಲಿ ಆರೋಪಿಯು ಮದ್ಯ ಮಾರಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ಆರೋಪಿಯನ್ನು ವಶಕ್ಕೆ ಪಡೆದು ಆತನ ಹೆಸರು ಮತ್ತು ವಿಳಾಸವನ್ನು ವಿಚಾರಿಸಿ ನಂತರ ಆತನ ವಶದಲ್ಲಿ ಇದ್ದ ಪ್ಲಾಸ್ಟೀಕ್ ಚೀಲವನ್ನು ಪರಿಶೀಲಿಸಿದಾಗ ಅದರಲ್ಲಿ ಮದ್ಯದ 45 ಟೆಟ್ರಾ ಪ್ಯಾಕೇಟ್ ಗಳು ಇದ್ದವು ಎಂದರೆ ಸರಿಯಲ್ಲ. ಅವುಗಳನ್ನು ನನ್ನ ಸಮಕ್ಷಮ ನಿಪಿ-2 ರಂತೆ ಮಹಜರ್ ಅನ್ನು ತಯಾರಿಸಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡು ಈಗ ನನಗೆ ತೋರಿಸುತ್ತಿರುವ ಪ್ಲಾಸ್ಟೀಕ್ ಚೀಲದಲ್ಲಿ ಹಾಕಿ ನಂತರ ನನ್ನ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಫೋಟೋವನ್ನೂ ಕೂಡಾ ತೆಗೆದಿರುತ್ತಾರೆ ಎಂದರೆ

ಸರಿಯಲ್ಲ. ದಿಃ28.05.2025 ರಂದು ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ' ದಿಃ26.05.2025 ರಂದು ನಾನು ಮತ್ತು ...... ಗುರುತಿಸುತ್ತೇನೆ' ಎಂದು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಬೇಕೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-</u>

(ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ).

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ